# 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 07

# ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಅಧಿನಿಯಮ, 2020

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕರ್ನಾಟಕ ನಾವಿನ್ಯತಾ ಪ್ರಾಧಿಕಾರ
4. ಪ್ರಾಧಿಕಾರದ ರಚನೆ
5. ಪ್ರಾಧಿಕಾರದ ಸಭೆಗಳು
6. ಖಾಲಿಹುದ್ದೆಗಳು, ಇತ್ಯಾದಿ, ಪ್ರಾಧಿಕಾರದ ನಡವಳಿಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ
7. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು
8. ಪ್ರಾಧಿಕಾರದ ಉಪ ಸಮಿತಿಗಳು
9. ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅನುಮತಿ
10. ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅರ್ಜಿಗಳು
11. ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ವಪ್ರೇರಣೆಯಿಂದ ಸ್ಥಾಪಿಸುವುದು
12. ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವವರಿಗೆ ಷರತ್ತುಗಳು ಮತ್ತು ನಿಬಂಧನೆಗಳು
13. ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಅಧಿಸೂಚನೆಯ ಮೂಲಕ ಸ್ಥಾಪಿಸುವುದು
14. ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವಿಕೆ
15. ನಿಯಂತ್ರಣಾ ತಾಂತ್ರಿಕ ವೇದಿಕೆಯ ಮಾರ್ಪಾಡು
16. ನಿಯಂತ್ರಣಾ ತಾಂತ್ರಿಕ ವೇದಿಕೆಯ ಮುಕ್ತಾಯ ಅಥವಾ ಹಿಂಪಡೆಯುವಿಕೆ
17. ಅಪೀಲುಗಳು
18. ತಾಂತ್ರಿಕ ಸಚಿವಾಲಯದ ರಚನೆ
19. ಪ್ರಾಧಿಕಾರದ ಆಯವ್ಯಯ
20. ಪ್ರಾಧಿಕಾರದ ನಿಧಿ
21. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
22. ವಾರ್ಷಿಕ ವರದಿ
23. ಮಾಹಿತಿಯ ಗೌಪ್ಯತೆ
24. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
25. ದಂಡಗಳು
26. ಸಿವಿಲ್ ನ್ಯಾಯಾಲಯಗಳ ಮೇಲೆ ಅಧಿಕಾರವ್ಯಾಪ್ತಿಯ ಪ್ರತಿಬಂಧ
27. ತೊಂದರೆಗಳ ನಿವಾರಣೆ
28. ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು
29. ನಿಯಮಗಳ ರಚನಾಧಿಕಾರ
30. ವಿನಿಯಮಗಳ ರಚನಾಧಿಕಾರ
31. ತಾತ್ಕಾಲಿಕ ಉಪಬಂಧಗಳು
32. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2020ರ ಅಧಿನಿಯಮ ಸಂಖ್ಯೆ 07.**-ಕರ್ನಾಟಕ ಸರ್ಕಾರವು ವಿಸ್ತೃತ ತಂತ್ರಜ್ಞಾನಗಳನ್ನು ಬಳಸಿಕೊಂಡಿರುವ ನಾವಿನ್ಯತಾ ಉತ್ಪನ್ನಗಳು ಮತ್ತು ಸೇವೆಗಳ ಬೆಳವಣಿಗೆಗೆ ಸಾಕ್ಷಿಯಾಗುತ್ತಿದ್ದು, ಅದು ಸಾಮಾನ್ಯವಾಗಿ ಸ್ಥಾಪಿತ ನಿಯಂತ್ರಣಾ ಆಡಳಿತ ಕ್ರಮಗಳ ಮಾನದಂಡಗಳ ವ್ಯಾಪ್ತಿಯೊಳಗೆ ಬರುವುದಿಲ್ಲ. ಈ ಪರಿವರ್ತನಕಾರರು (Innovators) ಕಾನೂನು ಸಂಕಷ್ಟಗಳಿಗೆ ಒಳಪಡುವರು ಹಾಗೂ ಇದು ನಾವಿನ್ಯತೆಯನ್ನು ತರುವಲ್ಲಿ ತಡೆಯೊಡ್ಡುವುದು. ಹೊಸ ಹೊಳವುಳ್ಳ ತಂತ್ರಜ್ಞಾನವನ್ನು ಬಳಸಿರುವ ಈ ಹೊಸ ಉತ್ಪನ್ನಗಳು ಮತ್ತು ಸೇವೆಗಳು ಮೂಡಿಸಿದ ನಿಯಂತ್ರಣ ಸವಾಲುಗಳನ್ನು ಪತ್ತೆಹಚ್ಚಲು ಕಾನೂನಿಗೆ ತಿದ್ದುಪಡಿ ಮಾಡುವುದು ಸಮಯವನ್ನು ತೆಗೆದುಕೊಳ್ಳುವುದು, ಈ ಮಧ್ಯಂತರದಲ್ಲಿ ನಾವಿನ್ಯತೆಯನ್ನು ಸಶಕ್ತಗೊಳಿಸಲು ಒಂದು ಕಾನೂನು ಚೌಕಟ್ಟನ್ನು ಸ್ಥಾಪಿಸುವ ಅಗತ್ಯವಿದೆ. ಆದ್ದರಿಂದ "ನಿಯಂತ್ರಣಾ ತಾಂತ್ರಿಕ ವೇದಿಕೆಗಳನ್ನು" ರಚಿಸುವುದನ್ನು ಬೆಂಬಲಿಸಲು "ಕರ್ನಾಟಕ ನಾವಿನ್ಯತಾ ಪ್ರಾಧಿಕಾರ"ವನ್ನು ಸ್ಥಾಪಿಸಬೇಕಾಗಿದ್ದು, ಅಲ್ಲಿ ಅಂಥ ಪರಿವರ್ತಕರು ನಾವಿನ್ಯತೆಯನ್ನು ಕೈಗೊಳ್ಳಲು ನಿಯಮಿಸಿದ ಅವಧಿಗಾಗಿ ಒಂದು ಕಿರು ವಿನಾಯತಿ ಗವಾಕ್ಷಿಯನ್ನು ಅನುವು ಮಾಡಿಕೊಟ್ಟು ಹಾಗೂ ರಾಜ್ಯವೂ ಸಹ ಅಂಥ ನಾವಿನ್ಯತೆಗಳೆಡೆಗೆ ಗಮನ ನೀಡುತ್ತಿದೆ ಮತ್ತು ಮುಂದುವರೆದು ಶಾಸನದ ಮೂಲಕ ಮತ್ತು ಅಗತ್ಯವಿದ್ದಲ್ಲಿ ತಿದ್ದುಪಡಿಗಳ ಮೂಲಕ ಸ್ಪಂದಿಸಲಾಗುತ್ತದೆ.

ಕರ್ನಾಟಕವು ಜಾಗತಿಕ ನಾವಿನ್ಯತಾ ಕೇಂದ್ರಗಳಲ್ಲಿ ಒಂದಾಗಿದೆ. ಹಲವಾರು ಹೊರ ದೇಶಗಳು ಕರ್ನಾಟಕದೊಂದಿಗೆ ಜಾಗತಿಕ ಮೈತ್ರಿಯನ್ನು ಹೊಂದಿದೆ. ಭಾರತ ಸರ್ಕಾರದ ನೀತಿ ಆಯೋಗವು ಕರ್ನಾಟಕಕ್ಕೆ ದೇಶದಲ್ಲಿಯೇ ಅತ್ಯುನ್ನತ ನಾವಿನ್ಯತಾ ರಾಜ್ಯವನ್ನಾಗಿ ಅಗ್ರ ಶ್ರೇಯಾಂಕವನ್ನು ನೀಡಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿದ್ಯುನ್ಮಾನ, ಚಿತ್ರಸಂಚಲನ (Animation) ಮತ್ತು ನವೋದ್ಯಮಗಳ ಮೇಲೆ ರಾಜ್ಯ ಸರ್ಕಾರದ ಪ್ರಮುಖ ಕಾರ್ಯಕ್ರಮವಾದ ಬೆಂಗಳೂರು ಟೆಕ್ ಸಮಿಟ್ ಅನ್ನು ಬೆಂಗಳುರು ಅರಮನೆಯಲ್ಲಿ 2019ರ ನವಂಬರ್ 18 ರಿಂದ 20ರ ವರೆಗೆ ಆಯೋಜಿಸಲಾಗಿದೆ. ಸರ್ಕಾರವು 20 ಹೊರ ದೇಶಗಳ ಭಾಗವಹಿಸುವಿಕೆಯ ದೃಢೀಕರಣವನ್ನು ಸ್ವೀಕರಿಸಿದೆ. ಕರ್ನಾಟಕವು ನಾವಿನ್ಯತೆ ಮತ್ತು ಉದ್ಯಮಶೀ‍ತೆಯನ್ನು ಪ್ರೋತ್ಸಾಹಿಸುವಲ್ಲಿ ಮತ್ತು ಉತ್ತೇಜಿಸುವಲ್ಲಿ ಇತರರಿಗಿಂತ ಮುಂದಿದೆ ಎಂಬುದನ್ನು ಜಗತ್ತಿಗೆ ಸಾರಲು ಕರ್ನಾಟಕ ನಾವಿನ್ಯತಾ ಪ್ರಾಧಿಕಾರದ ಸ್ಥಾಪನೆಯನ್ನು 2019ರ ನವಂಬರ್ 18ರಂದು ಬೆಂಗಳೂರು ಟೆಕ್ ಸಮಿಟ್ 2019ರ ಉದ್ಘಾಟನೆಯಂದು ಮಾನ್ಯ ಮುಖ್ಯಮಂತ್ರಿಯವರು ಘೋಷಿಸಲು ಉದ್ದೇಶಿಸಿದ್ದಾರೆ. ಆದ್ದರಿಂದ ಇತರೆ ರಾಜ್ಯಗಳ ಸ್ಪರ್ಧಾತ್ಮಕ ದೃಷ್ಟಿಕೋನದಿಂದಾಗಿ ಈ ಸ್ಥಾನವನ್ನು ಸುಸ್ಥಿರಗೊಳಿಸುವುದು ಮುಖ್ಯ ಅಗತ್ಯವಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಅಧ್ಯಾದೇಶ, 2019ನ್ನು (2019ರ ಕರ್ನಾಟಕ ಅಧ್ಯಾದೇಶ 2) ಮೇಲಿನ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ:02, ಕಡತ ಸಂಖ್ಯೆ: ಸಂವ್ಯಶಾಇ 06 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 32ನೆಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IV, ವಿಶೇಷ ಪತ್ರಿಕೆ ಸಂಖ್ಯೆ: 149 ದಿನಾಂಕ:27.04.2020ರಲ್ಲಿ ಪ್ರಕಟಣೆಗೊಂಡಿದೆ]

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 07

(2020ರ ಏಪ್ರಿಲ್ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಅಧಿನಿಯಮ, 2020

(2020ರ ಏಪ್ರಿಲ್ ತಿಂಗಳ 24ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ನಾವಿನ್ಯತಾ ತಂತ್ರಜ್ಞಾನಗಳನ್ನು ಉತ್ತೇಜಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಪ್ರಾಧಿಕಾರವನ್ನು ಸ್ಥಾಪಿಸಲು ಉಪಬಂಧವನ್ನು ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ನಾವಿನ್ಯತಾ ತಂತ್ರಜ್ಞಾನಗಳನ್ನು ಉತ್ತೇಜಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಪ್ರಾಧಿಕಾರವನ್ನು ಸ್ಥಾಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ - I
### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2019ರ ಡಿಸೆಂಬರ್ 05ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಪ್ರಾಧಿಕಾರ'' ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಕರ್ನಾಟಕ ನಾವಿನ್ಯತಾ ಪ್ರಾಧಿಕಾರ;

(ಬಿ) ``ಸರ್ಕಾರ'' ಎಂದರೆ, ಕರ್ನಾಟಕ ಸರ್ಕಾರ;

(ಸಿ) ``ಕಾನೂನು'' ಎಂದರೆ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಅಧಿನಿಯಮಿತವಾದ ಜಾರಿಯಲ್ಲಿರುವ ಯಾವುದೇ ಕಾನೂನು ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳು ಅಥವಾ ವಿನಿಯಮಗಳನ್ನು ಒಳಗೊಳ್ಳುತ್ತದೆ;

(ಡಿ) ``ಭಾಗವಹಿಸುವವರು'' (Participant) ಎಂದರೆ, ನಾವಿನ್ಯತೆಯನ್ನು ನಡೆಸುವಲ್ಲಿ ಭಾಗವಹಿಸುವುದಕ್ಕೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಸ್ಥಾಪನೆಯಾದ ನಿಯಂತ್ರಣಾ ತಾಂತ್ರಿಕ ವೇದಿಕೆಯೊಳಗೆ (Regulatory Sand box) ಸಾರ್ವಜನಿಕರಿಗೆ ಸರಕುಗಳು ಅಥವಾ ಸೇವೆಗಳನ್ನು ನೀಡುವುದಕ್ಕೆ ಅನುಮೋದನೆಯನ್ನು ಪಡೆದ ಯಾವೊಬ್ಬ ವ್ಯಕ್ತಿ;

(ಇ) ``ನಿಯಂತ್ರಣಾ ತಾಂತ್ರಿಕ ವೇದಿಕೆ'' (Regulatory Sand box) ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಬಹುದಾದ ಷರತ್ತುಗಳೊಂದಿಗೆ, ನಾವಿನ್ಯತೆಗಳನ್ನು ನಡೆಸುವ ಯಾವೊಬ್ಬ ಭಾಗವಹಿಸುವವನು, ಸಾರ್ವಜನಿಕರಿಗೆ ಸರಕುಗಳು ಅಥವಾ ಸೇವೆಗಳನ್ನು ನೀಡಬಹುದಾದರ ಜೊತೆಗೆ, ಯಾವುದೇ ಕಾನೂನಿನಿಂದ ಅಂಥ ವಿನಾಯಿತಿಗಳು ಅಥವಾ ಮಾರ್ಪಾಡುಗಳೊಂದಿಗೆ ಹಂಚಿಕೆಯಾದ ಸಮಯದೊಳಗೆ ನಾವಿನ್ಯತೆಗಳನ್ನು ನಡೆಸಲು ನೀಡಿದ ಅನುಮತಿ;

(ಎಫ್) ``ತಾಂತ್ರಿಕ ವೇದಿಕೆ ಕಾರ್ಯನಿರ್ವಾಹಕ'' ಎಂದರೆ, ಈ ಅಧಿನಿಯಮದ ಅಡಿಯಲ್ಲಿ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಕಾರ್ಯಾಚರಣೆ ಮಾಡಲು ಪ್ರಾಧಿಕಾರವು ಗೊತ್ತುಪಡಿಸಿದ, ಸರ್ಕಾರದ ಯಾವುದೇ ಖಾಸಗಿ ಏಜೆನ್ಸಿ ಅಥವಾ ಮಾಧ್ಯಮ (instrumentality) ; ಮತ್ತು

(ಜಿ) ``ತಾಂತ್ರಿಕ ಸಚಿವಾಲಯ'' ಎಂದರೆ, ಪ್ರಾಧಿಕಾರದ ತಾಂತ್ರಿಕ ಸಚಿವಾಲಯ.

## ಅಧ್ಯಾಯ – II

## ಪ್ರಾಧಿಕಾರ ಮತ್ತು ಅದರ ಉದ್ಯೋಗಿಗಳು

**3. ಕರ್ನಾಟಕ ನಾವಿನ್ಯತಾ ಪ್ರಾಧಿಕಾರ**.- (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಕ್ಕಾಗಿ ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸರ್ಕಾರವು ರಚಿಸತಕ್ಕದ್ದು.

(2) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರದ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು.

**4. ಪ್ರಾಧಿಕಾರದ ರಚನೆ.-** ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | |
|---|---|
| (1) ಮುಖ್ಯ ಮಂತ್ರಿಯವರು | ಅಧ್ಯಕ್ಷರು |
| (2) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿಗಳು | ಉಪಾಧ್ಯಕ್ಷರು |
| (3) ನಿಯಮಿಸಬಹುದಾದ ವಿಧಾನದಲ್ಲಿ ಸರ್ಕಾರವು ನಾಮನಿರ್ದೇಶಿಸಬಹುದಾದ ಐವರಿಗಿಂತ ಹೆಚ್ಚಿಲ್ಲದ ಪದನಿಮಿತ್ತ ಸದಸ್ಯರು | ಸದಸ್ಯರು |
| (4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯರು |
| (5) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯ-ಕಾರ್ಯದರ್ಶಿ |

**5. ಪ್ರಾಧಿಕಾರದ ಸಭೆಗಳು.-** (1) ಪ್ರಾಧಿಕಾರವು ವಿನಿಯಮಗಳ ಮೂಲಕ ಅಂಥ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳನ್ನು ಕಾರ್ಯಕಲಾಪ ಹಂಚಿಕೆಗೆ ಸಂಬಂಧಿಸಿದ ಪ್ರಕ್ರಿಯೆಯ ಅನುಸಾರವಾಗಿ ನಡೆಸತಕ್ಕದ್ದು.

(2) ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸುವ ಅಂಥ ಇತರ ವ್ಯಕ್ತಿಗಳನ್ನು, ಸಭೆಯ ಕಾರ್ಯಸೂಚಿಯಲ್ಲಿನ ಯಾವುದೇ ವಿಷಯದ ಬಗ್ಗೆ ಅವರ ದೃಷ್ಟಿಕೋನಗಳು ಅಥವಾ ಅನುಭವವನ್ನು ಪಡೆಯುವ ಸಲುವಾಗಿ, ಸಭೆಗೆ ಹಾಜರಾಗುವಂತೆ ಆಹ್ವಾನಿಸಬಹುದು.

(3) ಅಧ್ಯಕ್ಷರು, ಅಥವಾ ಅಧ್ಯಕ್ಷರ ಗೈರುಹಾಜರಿಯಲ್ಲಿ ಅಥವಾ ಅಧ್ಯಕ್ಷರ ನಿರ್ದೇಶನದ ಮೇರೆಗೆ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ಚಲಾಯಿಸುವ ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳ ತೀರ್ಮಾನಗಳನ್ನು ಒಳಗೊಂಡು ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು, ಪ್ರಾಧಿಕಾರದ ಸದಸ್ಯರು ಪರಸ್ಪರ ಒಮ್ಮತದ ಮೂಲಕ ನಿರ್ಧರಿಸತಕ್ಕದ್ದು.

(5) ಪ್ರಾಧಿಕಾರದ ಮೂರನೇ ಒಂದಕ್ಕೆ ಕಡಿಮೆಯಲ್ಲದಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು.

(6) ಸದಸ್ಯ ಕಾರ್ಯದರ್ಶಿಯು ಕಾಲ ಕಾಲಕ್ಕೆ ಅಧ್ಯಕ್ಷರು ಪ್ರತ್ಯಾಯೋಜಿಸಬಹುದಾದ ಅಥವಾ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**6. ಖಾಲಿಹುದ್ದೆಗಳು, ಇತ್ಯಾದಿ, ಪ್ರಾಧಿಕಾರದ ನಡವಳಿಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.-** ಪ್ರಾಧಿಕಾರದ ಯಾವುದೇ ಕಾರ್ಯ ಅಥವಾ ನಡವಳಿಗಳು ಈ ಕೆಳಕಂಡ ಕಾರಣಗಳಿಗಾಗಿ ಮಾತ್ರ ಅಸಿಂಧುವಾಗತಕ್ಕದ್ದಲ್ಲ, ಎಂದರೆ:-

(i) ಪ್ರಾಧಿಕಾರದಲ್ಲಿನ ಯಾವುದೇ ಖಾಲಿ ಹುದ್ದೆ; ಅಥವಾ

(ii) ತೀರ್ಮಾನದ ಆಶಯಗಳಿಗೆ ಬಾಧಕವಾಗದ ಪ್ರಾಧಿಕಾರದ ಕಾರ್ಯವಿಧಾನದಲ್ಲಿನ ಯಾವುದೇ ಅಕ್ರಮತೆ.

**7. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.-** ಪ್ರಾಧಿಕಾರವು ಈ ಕೆಳಕಂಡ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರವು,-

(ಎ) ನಾವಿನ್ಯತಾ ಉದ್ದೇಶಕ್ಕಾಗಿ, ಅದರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರ ವ್ಯಾಪ್ತಿಯೊಳಗೆ ಯಾವುದೇ ಕಾನೂನಿನ ಅನುಸರಣೆಯಿಂದ ಯಾವೊಬ್ಬ ಭಾಗವಹಿಸುವವನಿಗೆ ವಿನಾಯಿತಿ ನೀಡಬಹುದು; ಅಥವಾ

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಒಂದು ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಯ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂತೆ ಯಾವುದೇ ಕಾನೂನನ್ನು ಯಾವೊಬ್ಬ ಭಾಗವಹಿಸುವವನಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಮಾರ್ಪಡಿಸಬಹುದು ಮತ್ತು ಅನುಮತಿಸಬಹದು.

(ii) ಪ್ರಾಧಿಕಾರವು ಈ ಮುಂದಿನ ಅಧಿಕಾರವನ್ನು ಹೊಂದಿರತಕ್ಕದ್ದು,-

(ಎ) ಒಂದು ನಿರ್ದಿಷ್ಟ ನಿಯಂತ್ರಣಾ ತಾಂತ್ರಿಕ ವೇದಿಕೆಗೆ ತಾಂತ್ರಿಕ ವೇದಿಕೆಯ ನಿರ್ವಾಹಕನಾಗಿ ರಾಜ್ಯದ ಯಾವು ಏಜೆನ್ಸಿ ಅಥವಾ ಮಾಧ್ಯಮವನ್ನು ಗೊತ್ತುಪಡಿಸುವುದು; ಮತ್ತು

(ಬಿ) ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವೊಬ್ಬ ತಾಂತ್ರಿಕ ವೇದಿಕೆ ನಿರ್ವಾಹಕರಿಗೆ ನಿರ್ದೇಶನ ನೀಡುವುದು ಮತ್ತು ಅಂಥ ನಿರ್ದೇಶನವನ್ನು ಯಾವುದೇ ಕಾನೂನಿನ ಉದ್ದೇಶಕ್ಕಾಗಿ ಸರ್ಕಾರದ ನಿರ್ದೇಶನವೆಂದು ಭಾವಿಸತಕ್ಕದ್ದು;

(ಸಿ) ಅದರ ಅನುಭವಗಳ ಆಧಾರದ ಮೇಲೆ, ರಾಜ್ಯದಲ್ಲಿ ನಾವಿನ್ಯತೆಗಳ ಉತ್ತೇಜನವನ್ನು ಸುಗಮಗೊಳಿಸಲು, ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಗಳು, ನಿಯಮಗಳು ಅಥವಾ ವಿನಿಯಮಗಳಿಗೆ ಅಗತ್ಯವಾಗಿರುವುದು ಯಾವುದಾದರೂ ಇದ್ದಲ್ಲಿ, ಅವುಗಳ ತಿದ್ದುಪಡಿಗೆ ಶಿಫಾರಸ್ಸು ಮಾಡತಕ್ಕದ್ದು. ಸರ್ಕಾರವು ಶಿಫಾರಸ್ಸುಗಳನ್ನು ಪರಿಗಣಿಸಬಹುದು ಮತ್ತು ಅಗತ್ಯವಿದ್ದೆಡೆ ಸೂಕ್ತ ತಿದ್ದುಪಡಿಯನ್ನು ತರಬಹುದು.

(iii) ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಒಂದು ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಯ ಮೊದಲು, ಸ್ಥಾಪನೆಯ ಅವಧಿಯಲ್ಲಿ ಅಥವಾ ಸ್ಥಾಪನೆಯ ತರುವಾಯ ಸಂಬಂಧಪಟ್ಟ ಮಧ್ಯಸ್ಥದಾರರೊಂದಿಗೆ (Stakeholders) ಪ್ರಾಧಿಕಾರವು ಸಾರ್ವಜನಿಕ ಸಮಾಲೋಚನೆಯನ್ನು ನಡೆಸಬಹುದು.

(iv) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಸಹ ಹೊಂದಿರತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**8. ಪ್ರಾಧಿಕಾರದ ಉಪ ಸಮಿತಿಗಳು.-** (1) ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಉಪಾಧ್ಯಕ್ಷನು ಅಧ್ಯಕ್ಷನಾಗಿರುವ ಮತ್ತು ಪ್ರತಿಯೊಂದು ಉಪಸಮಿತಿಗೆ ಐದು ಜನರಿಗೆ ಮೀರದಂಥ ಇತರ ಸದಸ್ಯರಿರುವ ಒಂದು ಅಥವಾ ಹೆಚ್ಚು ಉಪಸಮಿತಿಗಳನ್ನು ರಚಿಸಬಹುದು.

(2) ಉಪಸಮಿತಿಗಳು, ಅವುಗಳಿಗೆ ಪ್ರಾಧಿಕಾರವು ಪ್ರತ್ಯಾಯೋಜಿಸಿದ ಅಂಥ ಅಧಿಕಾರವನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಉಪಸಮಿತಿಯು ಕನಿಷ್ಠ ಪಕ್ಷ ತಿಂಗಳಿಗೆ ಒಂದು ಸಲವಾದರೂ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಯಲ್ಲಿನ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಕಾರ್ಯವಿಧಾನವನ್ನು ಪಾಲಿಸತಕ್ಕದ್ದು.

## ಅಧ್ಯಾಯ III

## ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವ ಮತ್ತು ಅದರಲ್ಲಿ ಭಾಗವಹಿಸುವ ಕಾರ್ಯವಿಧಾನ

**9. ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅನುಮತಿ.-** ಪ್ರಾಧಿಕಾರವು ಯಾವುದೇ ನಾವಿನ್ಯತೆಯ ಉತ್ತೇಜನಕ್ಕಾಗಿ ಹಾಗೆ ಮಾಡಬೇಕೆಂದು ಅಭಿಪ್ರಾಯಪಟ್ಟಲ್ಲಿ ಈ ಅಧ್ಯಾಯದ ಅಡಿಯಲ್ಲಿನ ಕಾರ್ಯವಿಧಾನಕ್ಕೆ ಅನುಸಾರವಾಗಿ ಒಂದು ನಿಯಂತ್ರಣಾ ತಾಂತ್ರಿಕ ವೇದಿಕೆಯ ಕಾರ್ಯನಿರ್ವಹಣೆಗೆ ಅನುಮತಿಯನ್ನು ನೀಡಬಹುದು.

**10. ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅರ್ಜಿಗಳು.-** (1) ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅನುಮತಿಯನ್ನು ಬಯಸುವ ಯಾವೊಬ್ಬ ವ್ಯಕ್ತಿಯು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಹಾಗೂ ನಿಯಂತ್ರಣಾ ತಾಂತ್ರಿಕ ವೇದಿಕೆ ಮತ್ತು ಪ್ರಸ್ತಾವಿತ ತಾಂತ್ರಿಕ ವೇದಿಕೆ ನಿರ್ವಾಹಕನ ಅಗತ್ಯವನ್ನು ತಿಳಿಸತಕ್ಕದ್ದು.

(2) ಪ್ರಸ್ತಾವಿತ ನಿಯಂತ್ರಣಾ ತಾಂತ್ರಿಕ ವೇದಿಕೆಯ ಕಾರ್ಯಸಾಧ್ಯತೆ ಮತ್ತು ಅಪೇಕ್ಷಣೀಯತೆ ಕುರಿತು ಅಂಥ ಅರ್ಜಿಯಲ್ಲಿ ಪ್ರಸ್ತಾವಿತ ತಾಂತ್ರಿಕ ವೇದಿಕೆಯ ಕಾರ್ಯನಿರ್ವಾಹಕನ ಒಳಾಂಶಗಳು ಮತ್ತು ಶಿಫಾರಸ್ಸುಗಳನ್ನು ಪ್ರಾಧಿಕಾರವು ಕೋರತಕ್ಕದ್ದು.

(3) ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ಸ್ವೀಕರಿಸಿದ ಯಾವುದೇ ಅರ್ಜಿಯನ್ನು 60 ದಿನಗಳ ಒಳಗಾಗಿ ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗಾಗಿ ಅಂಥ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಅಥವಾ ಅದಕ್ಕೆ ಅನುಮತಿಸತಕ್ಕದ್ದು.

(4) ಪ್ರಾಧಿಕಾರವು, ಪ್ರಸ್ತಾವಿತ ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಯು ಕಾರ್ಯಸಾಧ್ಯವಾಗಿದೆ ಮತ್ತು ಅಪೇಕ್ಷಣೀಯವಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ ಅದು,-

(ಎ) ಅಂಥ ನಿಯಂತ್ರಣಾ ತಾಂತ್ರಿಕ ವೇದಿಕೆಯ ಅಗತ್ಯತೆಯನ್ನು ತಿಳಿಸುತ್ತಾ, ಪ್ರಶ್ನಿತ ನಾವಿನ್ಯತೆಯನ್ನು ಉತ್ತೇಜಿಸುವುದಕ್ಕಾಗಿ ಯಾವುದೇ ಕಾನೂನಿನಿಂದ ವಿನಾಯಿತಿಗಳು ಅಥವಾ ಮಾರ್ಪಾಡುಗಳು ನೀಡುವ ಅಗತ್ಯತೆಯನ್ನು, ತಾನು ಸೂಕ್ತವೆಂದು ಭಾವಿಸುವ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಸಮಾಜಕ್ಕೆ ವ್ಯಾಪಕ ಪ್ರಯೋಜನಗಳನ್ನು ಒದಗಿಸುವಲ್ಲಿ ಅಂಥ ನಾವಿನ್ಯತೆಯ ಸಂಭಾವ್ಯತೆಯನ್ನು ತಿಳಿಸುತ್ತಾ, ಒಂದು ಲಿಖಿತ ಆದೇಶವನ್ನು ಹೊರಡಿಸತಕ್ಕದ್ದು; ಮತ್ತು

(ಬಿ) 13ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯ ಮೂಲಕ ನಿಯಂತ್ರಣಾ ತಾಂತ್ರಿಕ ವೇದಿಕೆಯ ಸ್ಥಾಪನೆಗೆ ಅನುಮತಿಯನ್ನು ನೀಡತಕ್ಕದ್ದು.

(5) ಪ್ರಸ್ತಾವಿತ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವುದು ಕಾರ್ಯಸಾಧ್ಯವಲ್ಲ ಅಥವಾ ಅಪೇಕ್ಷಣೀಯವಲ್ಲ, ಅಥವಾ ಅಂಥ ನಾವಿನ್ಯತೆಯ ಉತ್ತೇಜನಕ್ಕಾಗಿ ಯಾವುದೇ

ಕಾನೂನಿನಿಂದ ಸಡಿಲಿಕೆ ಅಥವಾ ವಿನಾಯಿತಿಯ ಅಗತ್ಯವಿಲ್ಲ ಎಂದು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಲಿಖಿತ ಆದೇಶದ ಮೂಲಕ ಅದು ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(6) ಪ್ರಾಧಿಕಾರವು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಮತ್ತು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಸಂಬಂಧಿತ ಮಧ್ಯಸ್ಥಗಾರರೊಂದಿಗೆ ಸಾರ್ವಜನಿಕ ಸಮಾಲೋಚನೆಯನ್ನು ಸಹ ನಡೆಸದ ಹೊರತು (4)ನೇ ಉಪಪ್ರಕರಣ ಅಥವಾ (5)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**11. ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ವಪ್ರೇರಣೆಯಿಂದ ಸ್ಥಾಪಿಸುವುದು.-** (1) 9ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರವು ಹಾಗೆ ಮಾಡಬೇಕೆಂದು ಅಭಿಪ್ರಾಯಪಟ್ಟಲ್ಲಿ, ತಾನಾಗಿಯೇ ಒಂದು ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸಬಹುದು ಮತ್ತು 13ನೇ ಪ್ರಕರಣದ ಅಡಿಯಲ್ಲಿನ ಕಾರ್ಯವಿಧಾನಕ್ಕೆ ಅನುಸಾರವಾಗಿ, ಒಬ್ಬರು ತಾಂತ್ರಿಕ ವೇದಿಕೆ ಕಾರ್ಯನಿರ್ವಾಹಕರನ್ನು ಗೊತ್ತುಪಡಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವ ತೀರ್ಮಾನವು ಈ ಮುಂದಿನ ಕಾರ್ಯವಿಧಾನಕ್ಕೆ ಅನುಸಾರವಾಗಿರತಕ್ಕದ್ದು, ಎಂದರೆ:-

(ಎ) ನೋಟೀಸಿನ ದಿನಾಂಕದಿಂದ ಮೂವತ್ತು ದಿನಗಳೊಳಗೆ ಹೂಡುವಳಿಗಾಗಿ ಮನವಿಗಳನ್ನು ಆಹ್ವಾನಿಸಿ, ಪ್ರಸ್ತಾವಿತ ಸ್ಥಾಪಿಸಬೇಕಾದ ನಿಯಂತ್ರಣಾ ತಾಂತ್ರಿಕ ವೇದಿಕೆ ಮತ್ತು ಪ್ರಸ್ತಾವಿತ ತಾಂತ್ರಿಕ ವೇದಿಕೆ ಕಾರ್ಯನಿರ್ವಾಹಕನ ವಿವರಗಳೊಂದಿಗೆ ಜನಸಾಮಾನ್ಯರಿಗೆ ನೋಟೀಸನ್ನು ನೀಡತಕ್ಕದ್ದು.

**ವಿವರಣೆ:** ಅಂಥ ನೋಟೀಸನ್ನು ಪ್ರಾಧಿಕಾರದ ಜಾಲತಾಣದಲ್ಲಿ ಹಾಕಿದಲ್ಲಿ ಮತ್ತು ರಾಜ್ಯದಲ್ಲಿ ಅತಿಹೆಚ್ಚು ಪ್ರಸರಣವುಳ್ಳ ಇಂಗ್ಲಿಷ್ ವಾರ್ತಾಪತ್ರಿಕೆ ಮತ್ತು ಕನ್ನಡ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಿದಲ್ಲಿ, ಸಾರ್ವಜನಿಕರಿಗೆ ನೋಟೀಸನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಪ್ರಾಧಿಕಾರವು (ಎ) ಖಂಡದ ಅಡಿಯಲ್ಲಿ ನೋಟೀಸನ್ನು ನೀಡಿದ ಮೂವತ್ತು ದಿನಗಳ ಮುಕ್ತಾಯದ ತರುವಾಯ, ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವುದಕ್ಕೆ ಕಾರ್ಯಸಾಧ್ಯತೆ ಮತ್ತು ಅಪೇಕ್ಷಣೀಯತೆಯ ಕುರಿತು ಮಧ್ಯಸ್ಥಗಾರರಿಂದ ಹೂಡುವಳಿಗಳನ್ನು ಕೋರಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಸಾರ್ವಜನಿಕ ಸಮಾಲೋಚನೆಯನ್ನು ನಡೆಸತಕ್ಕದ್ದು.

(ಸಿ) ಪ್ರಾಧಿಕಾರವು, ನಿಯಂತ್ರಣಾ ತಾಂತ್ರಿಕ ವೇದಿಕೆಯ ಕಾರ್ಯಸಾಧ್ಯತೆ ಮತ್ತು ಅಪೇಕ್ಷಣೀಯತೆಯ ಕುರಿತು ಪ್ರಸ್ತಾವಿತ ತಾಂತ್ರಿಕ ವೇದಿಕೆ ಕಾರ್ಯನಿರ್ವಾಹಕನ ಹೂಡುವಳಿಗಳು ಮತ್ತು ಶಿಫಾರಸ್ಸುಗಳನ್ನು ಕೋರತಕ್ಕದ್ದು.

(3) ಪ್ರಾಧಿಕಾರವು, ಪ್ರಸ್ತಾವಿತ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವುದು ಕಾರ್ಯಸಾಧ್ಯ ಮತ್ತು ಅಪೇಕ್ಷಣೀಯ ಎಂದು ಅಭಿಪ್ರಾಯಪಟ್ಟಲ್ಲಿ, ಅದು,-

(ಎ) ಅಂಥ ನಿಯಂತ್ರಣಾ ತಾಂತ್ರಿಕ ವೇದಿಕೆಯ ಅಗತ್ಯತೆಯನ್ನು ತಿಳಿಸುತ್ತಾ, ಪ್ರಶ್ನಿತ ನಾವಿನ್ಯತೆಯನ್ನು ಉತ್ತೇಜಿಸುವುದಕ್ಕಾಗಿ ಯಾವುದೇ ಕಾನೂನಿನಿಂದ ವಿನಾಯಿತಿಗಳು ಅಥವಾ ಮಾರ್ಪಾಡುಗಳು ನೀಡುವ ಅಗತ್ಯತೆಯನ್ನು, ತಾನು ಸೂಕ್ತವೆಂದು ಭಾವಿಸುವ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಸಮಾಜಕ್ಕೆ ವ್ಯಾಪಕ ಪ್ರಯೋಜನಗಳನ್ನು ಒದಗಿಸುವಲ್ಲಿ ಅಂಥ ನಾವಿನ್ಯತೆಯ ಸಂಭಾವ್ಯತೆಯನ್ನು ಒಳಗೊಂಡ ಒಂದು ಲಿಖಿತ ಆದೇಶವನ್ನು ಹೊರಡಿಸತಕ್ಕದ್ದು.

(ಬಿ) 13ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯ ಮೂಲಕ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸತಕ್ಕದ್ದು.

(4) ಪ್ರಸ್ತಾವಿತ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸುವುದು ಕಾರ್ಯಸಾಧ್ಯವಲ್ಲ ಅಥವಾ ಅಪೇಕ್ಷಣೀಯವಲ್ಲ, ಅಥವಾ ಅಂಥ ನಾವಿನ್ಯತೆಯ ಉತ್ತೇಜನಕ್ಕಾಗಿ ಯಾವುದೇ ಕಾನೂನಿನಿಂದ ಸಡಿಲಿಕೆ ಅಥವಾ ವಿನಾಯಿತಿಯ ಅಗತ್ಯವಿಲ್ಲ ಎಂದು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಲಿಖಿತ ಆದೇಶದ ಮೂಲಕ ಅದು ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

**12. ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವವರಿಗೆ ಷರತ್ತುಗಳು ಮತ್ತು ನಿಬಂಧನೆಗಳು.-** (1) ನಿಯಮಿಸಬಹುದಾದ ಅಂಥ ಷರತ್ತು ಮತ್ತು ನಿಬಂಧನೆಗಳನ್ನು ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಭಾಗವಹಿಸುವವನು ಅನುಸರಿಸತಕ್ಕದ್ದು.

(2) ಈ ಕೆಳಗಿನ ಎಲ್ಲಾ ಅಥವಾ ಯಾವುದಾದರೂ ಒಂದಕ್ಕೆ ಅಂಥ ಷರತ್ತುಗಳನ್ನು ಉಪಬಂಧಿಸಬಹುದು, ಎಂದರೆ:-

(ಎ) ನಿಯಮಿಸಲಾದ ಗ್ರಾಹಕರಿಗೆ ನಾವಿನ್ಯತೆಯನ್ನು ನಡೆಸಬಹುದಾದ ಹಾಗೂ ಸರಕುಗಳು ಅಥವಾ ಸೇವೆಗಳನ್ನು ಒದಗಿಸಬಹುದಾದ ಕಾಲಾವಧಿ ಮತ್ತು ಭೌಗೋಳಿಕ ಪ್ರದೇಶ:

ಪರಂತು, 15ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ವಿಸ್ತರಣೆಗೆ ಒಳಪಟ್ಟು, ನಿಯಂತ್ರಣಾ ತಾಂತ್ರಿಕ ವೇದಿಕೆಯ ಕಾಲಾವಧಿಯು ಒಂದು ವರ್ಷಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ, ಆದಾಗ್ಯೂ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಹೆಚ್ಚುವರಿಯಾಗಿ ಒಂದು ವರ್ಷಕ್ಕೆ ಮೀರದಂತೆ ವಿಸ್ತರಿಸಬಹುದು.

(ಬಿ) ಸರಕು ಮತ್ತು ಸೇವೆಗಳನ್ನು ನೀಡಬೇಕಾಗಿರುವ ಗ್ರಾಹಕರ ಅರ್ಹತೆ ಮತ್ತು ಸಂಖ್ಯೆಯನ್ನು ಒದಗಿಸಬಹುದು.

(ಸಿ) ಗ್ರಾಹಕರ ರಕ್ಷಣೆ ಮತ್ತು ಭಾಗವಹಿಸುವವನು ಅನುಸರಿಸಬೇಕಾದ ಅಪಾಯ ಉಪಶಮನಗೊಳಿಸುವಲ್ಲಿ ರಕ್ಷಣೋಪಾಯವನ್ನು ಒಳಗೊಂಡು ಆದರೆ, ವ್ಯಾಜ್ಯ ಮತ್ತು ಕುಂದುಕೊರತೆ ಪರಿಹಾರ ಷರತ್ತುಗಳಿಗೆ ಮಿತಿಗೊಳಿಸದೆ ಗ್ರಾಹಕರಿಗೆ ಅಪಾಯದ ಬಗ್ಗೆ ಕಡ್ಡಾಯವಾಗಿ ಬಹಿರಂಗಪಡಿಸುವುದು, ಗ್ರಾಹಕರ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಅಗತ್ಯತೆಗಳು ಮತ್ತು ತಪ್ಪಿತಸ್ಥ ಪ್ರಕರಣಗಳಲ್ಲಿ ಸಾಕಷ್ಟು ಪರಿಹಾರದ ವ್ಯವಸ್ಥೆಗಳು;

(ಡಿ) ಭಾಗವಹಿಸುವವರ ಪ್ರಧಾನ (capital) ಅಗತ್ಯಗಳು;

(ಇ) ದತ್ತಾಂಶ ಭದ್ರತೆ ಮತ್ತು ಗೌಪ್ಯ ಅಗತ್ಯಗಳು;

(ಎಫ್) ಭಾಗವಹಿಸುವವರ ಅವಶ್ಯಕತೆಗಳನ್ನು ತಾಂತ್ರಿಕ ವೇದಿಕೆ ನಿರ್ವಾಹಕನಿಗೆ ವರದಿ ಮಾಡುವುದು; ಮತ್ತು

(ಜಿ) ಪ್ರಾಧಿಕಾರವು, ಸೂಕ್ತವೆಂದು ಭಾವಿಸಬಹುದಾದ ಯಾವುದೇ ಇತರ ನಿಬಂಧನೆಗಳು ಅಥವಾ ಷರತ್ತುಗಳು.

(3) ನಿಯಂತ್ರಣಾ ತಾಂತ್ರಿಕ ವೇದಿಕೆಯ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಭಾಗವಹಿಸುವವರ ಅನುಪಾಲನೆಯನ್ನು ಮೇಲ್ವಿಚಾರಿಸುವುದಕ್ಕಾಗಿ ತಾಂತ್ರಿಕ ವೇದಿಕೆ ನಿರ್ವಾಹಕನು ಜವಾಬ್ದಾರನಾಗಿರತಕ್ಕದ್ದು.

**13. ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಅಧಿಸೂಚನೆಯ ಮೂಲಕ ಸ್ಥಾಪಿಸುವುದು.-** (1) 10 ಮತ್ತು 11ನೇ ಪ್ರಕರಣದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ ಪ್ರಾಧಿಕಾರವು, ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಸ್ಥಾಪಿಸಿದಾಗ, ಅದು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅದನ್ನು ನೆರವೇರಿಸತಕ್ಕದ್ದು ಹಾಗೂ ಅಂಥ ನಿಯಂತ್ರಣಾ ತಾಂತ್ರಿಕ ವೇದಿಕೆಯು ಅಂಥ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಅಧಿಸೂಚನೆಯು, ನಿಯಂತ್ರಣಾ ತಾಂತ್ರಿಕ ವೇದಿಕೆಯ ನಿರ್ವಹಣಾ ಅವಧಿ, ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವವರು ಅನುಸರಿಸಬೇಕಾದ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ವಿನಾಯಿತಿಸಿದ ಮತ್ತು ಮಾರ್ಪಾಡುಗೊಳಿಸಿದ ಕಾನೂನುಗಳ ಉಪಬಂಧಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಹಾಗೂ ತಾಂತ್ರಿಕ ವೇದಿಕೆಯ ನಿರ್ವಾಹಕನನ್ನು ನಿರ್ದಿಷ್ಟಪಡಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಮಾಡಲಾದ ಯಾವುದೇ ಅಧಿಸೂಚನೆಯು ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಅಂಥ ಕಾನೂನಿನ ಅಡಿಯಲ್ಲಿ ಯಾವುದೇ ಲಿಖಿತ ಪತ್ರದಲ್ಲಿ ಅಸಂಗತವಾದುದು ಏನೇ ಇದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು (1)ನೇ ಉಪಪ್ರಕರಣದಲ್ಲಿ ಮಾಡಿದ ಅಧಿಸೂಚನೆಯು ಪೂರ್ವಾನ್ವಯ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ.

(5) (1)ನೇ ಉಪಪ್ರಕರಣದಲ್ಲಿ ಮಾಡಲಾದ ಯಾವುದೇ ಅಧಿಸೂಚನೆಯು ಅನುಮತಿಸಿದ ಅವಧಿಯ ಮುಕ್ತಾಯದ ತರುವಾಯ ಅಥವಾ 16ನೇ ಪ್ರಕರಣದ ಅಡಿಯಲ್ಲಿ ನಿಯಂತ್ರಣಾ ತಾಂತ್ರಿಕ ವೇದಿಕೆಯನ್ನು ಹಿಂತೆಗೆದುಕೊಂಡಾಗ ಅದರ ಪರಿಣಾಮವು ಮುಕ್ತಾಯಗೊಳ್ಳತಕ್ಕದ್ದು.

(6) ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**14. ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವಿಕೆ.-** (1) 13ನೇ ಪ್ರಕರಣದ ಅಡಿಯಲ್ಲಿನ ನಿಯಂತ್ರಣಾ ತಾಂತ್ರಿಕ ವೇದಿಕೆಯ ಅಧಿಸೂಚನೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ತಾಂತ್ರಿಕ ವೇದಿಕೆಯ ನಿರ್ವಾಹಕನು, ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು,-

(ಎ) ಕರ್ನಾಟಕದಲ್ಲಿ ಆತನು ವ್ಯವಹಾರವನ್ನು ನಡೆಸುತ್ತಿದ್ದ ಅಥವಾ ನೋಂದಾಯಿತ ಕಚೇರಿ ಅಥವಾ ಶಾಖಾ ಕಚೇರಿಯನ್ನು ಹೊಂದಿದ್ದ ಹೊರತು,

(ಬಿ) ಕರ್ನಾಟಕದಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲು ಪ್ರಸ್ತಾಪಿಸಬೇಕಾದ ಅಥವಾ ನಿರ್ವಹಿಸಿದ, ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಪರೀಕ್ಷಿಸಬೇಕಾದ ಸರಕುಗಳು ಅಥವಾ ಸೇವೆಯನ್ನು ಸ್ವೀಕರಿಸಿದ್ದ ಹೊರತು,

- (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಅರ್ಜಿಯನ್ನು ಹಾಕಲು ಅರ್ಹನಾಗತಕ್ಕದ್ದಲ್ಲ.

(3) ಅರ್ಜಿಯು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಇರತಕ್ಕದ್ದು ಹಾಗೂ ಪ್ರಸ್ತಾವಿತ ಭಾಗವಹಿಸುವವನು ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸಲು ಪ್ರಾಧಿಕಾರದ ಮೂಲಕ ಹೇಳಲಾದ ಷರತ್ತುಗಳನ್ನು ಪೂರೈಸುವ ರೀತಿಯನ್ನು (5)ನೇ ಉಪಪ್ರಕರಣದ ಅಡಿಯಲ್ಲಿ ಹೇಳಲಾದ ಮಾನದಂಡಗಳೊಂದಿಗೆ ಸೂಚಿಸತಕ್ಕದ್ದು.

(4) ತಾಂತ್ರಿಕ ವೇದಿಕೆ ನಿರ್ವಾಹಕನು, ಈ ಪ್ರಕರಣದ ಅಡಿಯಲ್ಲಿ ಸ್ವೀಕರಿಸಿದ ಯಾವುದೇ ಅರ್ಜಿಯನ್ನು ಮೂವತ್ತು ದಿನಗಳೊಳಗಾಗಿ ತಿರಸ್ಕರಿಸತಕ್ಕದ್ದು ಅಥವಾ ಅದನ್ನು ಅನುಮೋದಿಸತಕ್ಕದ್ದು. ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವುದಕ್ಕಾಗಿನ ಯಾವುದೇ ಅರ್ಜಿಯನ್ನು ಅನುಮೋದಿಸುವಾಗ ಅಥವಾ ತಿರಸ್ಕರಿಸುವಾಗ, ಪ್ರಾಧಿಕಾರವು ಪ್ರಸ್ತಾವಿತ ಭಾಗವಹಿಸುವವನಿಂದ ಈ ಮುಂದಿನ ಮಾನದಂಡಗಳನ್ನು ಪೂರೈಸುವ ಕುರಿತು ಖಚಿತಪಡಿಸಿಕೊಳ್ಳತಕ್ಕದ್ದು,-

(ಎ) ನಿಯಂತ್ರಣಾ ತಾಂತ್ರಿಕ ವೇದಿಕೆಯ ವ್ಯಾಪ್ತಿಯೊಳಗೆ ಸರಕುಗಳು ಅಥವಾ ಸೇವೆಗಳನ್ನು ಒದಗಿಸಲಾಗಿದೆಯೆ;

(ಬಿ) ಸರಕುಗಳು ಅಥವಾ ಸೇವೆಗಳ ಕಾರ್ಯಪ್ರಯೋಗದಲ್ಲಿ ನಿರ್ಬಂಧಿಸುವ ಅಥವಾ ತಡೆಯೊಡ್ಡುವ ಯಾವುದೇ ಕಾನೂನುಗಳ ರೂಪದಲ್ಲಿನ ನಿಯಂತ್ರಣ ಅಡ್ಡಿಗಳಿವೆಯೆ;

(ಸಿ) ಪ್ರಸ್ತಾವಿತ ಭಾಗವಹಿಸುವವನು ನಿಯಂತ್ರಣಾ ತಾಂತ್ರಿಕ ವೇದಿಕೆಯೊಳಗೆ ಅಂಥ ವ್ಯಕ್ತಿಯು ನೀಡುವ ಸರಕುಗಳು ಅಥವಾ ಸೇವೆಗಳು ಮಾರುಕಟ್ಟೆಯಲ್ಲಿ ಪರೀಕ್ಷಣೆಗಾಗಿ ಸಿದ್ಧವಿದೆಯೇ ಮತ್ತು ಪ್ರಸ್ತಾವಿತ ಭಾಗವಹಿಸುವವನು ನಿಯಂತ್ರಣಾ ತಾಂತ್ರಿಕ ವೇದಿಕೆಗಳಿಗೆ ಸರಕುಗಳು ಅಥವಾ

ಸೇವೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಪರಿಪೂರ್ಣವಾಗಿ ಸಿದ್ಧಗೊಂಡ ಪರೀಕ್ಷಣಾ ಯೋಜನೆಯನ್ನು ಹೊಂದಿರುವನೆ;

(ಡಿ) ಒಂದೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಕೊಡುಗೆಗಳಿಂದ ಗಮನಾರ್ಹವಾಗಿ ವಿಭಿನ್ನವಾದ, ಹೊಸ ತಂತ್ರಜ್ಞಾನವನ್ನು ಬಳಸಿರುವ ಅಥವಾ ಅಸ್ತಿತ್ವದಲ್ಲಿರುವ ತಂತ್ರಜ್ಞಾನವನ್ನು ವಿನೂತನ ಮಾದರಿಯಲ್ಲಿ ಬಳಸಿಕೊಂಡ ನೈಜ ನಾವಿನ್ಯತೆಯಿದೆಯೇ;

(ಇ) ಸರಕುಗಳು ಅಥವಾ ಸೇವೆಗಳ ಕರ್ನಾಟಕದೊಳಗಿನ ಗ್ರಾಹಕರಿಗೆ ಗುರುತಿಸಬಹುದಾದ ಪ್ರಯೋಜನವನ್ನು ನೀಡುತ್ತಿವೆಯೇ;

(ಎಫ್) ಇತರ ವಿಷಯಗಳೊಂದಿಗೆ ಸರಕುಗಳು ಅಥವಾ ಸೇವೆಗಳ ಕಾರ್ಯಪ್ರಯೋಜನವು ವಿಸ್ತೃತ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವುದೆ, ಕರ್ನಾಟಕದಲ್ಲಿ ಉದ್ಯೋಗವನ್ನು ಸೃಜಿಸಲು ಸರಕುಗಳು ಅಥವಾ ಸೇವೆಗಳ ಸಾಮರ್ಥ್ಯ;

(ಜಿ) ಸರಕುಗಳು ಅಥವಾ ಸೇವೆಗಳು ಗ್ರಾಹಕರನ್ನು ಹಾನಿಗಳು, ಗಾಯಗಳು ಅಥವಾ ನಷ್ಟಗಳ ಅಪಾಯಗಳನ್ನು ಗಮನಾರ್ಹ ಹಂತಗಳಿಗೆ ಒಳಪಡಿಸದಿರುವುದು;

(ಎಚ್) ನಿಯಂತ್ರಣಾ ತಾಂತ್ರಿಕ ವೇದಿಕೆಯ ಅಡಿಯಲ್ಲಿ ಪರೀಕ್ಷಣಾ ಅವಧಿಯ ಮುಕ್ತಾಯದ ತರುವಾಯ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಪ್ರಯೋಗವನ್ನು ಮಾಡಲು ಪ್ರಸ್ತಾವಿತ ಭಾಗವಹಿಸುವವರ ಸಾಮರ್ಥ್ಯ ಮತ್ತು ಸರಕುಗಳು ಅಥವಾ ಸೇವೆಗಳು ಸಮರ್ಥವಾಗಿದೆಯೇ; ಮತ್ತು

(ಐ) ಕರ್ನಾಟಕದಿಂದ ಮತ್ತು ಅದರ ವ್ಯಾಪ್ತಿಯೊಳಗೆ ಕಾರ್ಯಪ್ರಯೋಗಗೊಳಿಸಬೇಕಾದ ಅಥವಾ ನಿರ್ಧರಿಸಬೇಕಾದ ಸರಕುಗಳು ಅಥವಾ ಸೇವೆಗಳು ಅಸ್ತಿತ್ವದಲ್ಲಿರುವ ನಿಯಂತ್ರಣಾ ತಾಂತ್ರಿಕ ವೇದಿಕೆಯ ಅಡಿಯಲ್ಲಿ ವಿನ್ಯಾಸಗೊಂಡಿವೆಯೇ.

(5) ಈ ಪ್ರಕರಣದ ಅಡಿಯಲ್ಲಿ ನೀಡಿದ ಅರ್ಜಿಗಳನ್ನು ಮೌಲ್ಯಮಾಪನ ಮಾಡುವ ಉದ್ದೇಶಕ್ಕಾಗಿ ತಾಂತ್ರಿಕ ವೇದಿಕೆಯ ನಿರ್ವಾಹಕನು,-

(ಎ) ಪ್ರಾಧಿಕಾರದೊಂದಿಗೆ ಸಮಾಲೋಚಿಸಬಹುದು; ಅಥವಾ

(ಬಿ) ಪ್ರಸ್ತಾವಿತ ಭಾಗವಹಿಸುವವನಿಂದ ಯಾವುದೇ ಮಾಹಿತಿಯನ್ನು ಕೋರಬಹುದು.

(6) (4)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಅರ್ಜಿಯ ಅನುಮೋದನೆಯ ಅಥವಾ ತಿರಸ್ಕಾರದ ಯಾವುದೇ ಆದೇಶವನ್ನು ಲಿಖಿತದಲ್ಲಿನ ಕಾರಣಗಳೊಂದಿಗೆ ಪ್ರಾಧಿಕಾರದ ಜಾಲತಾಣದಲ್ಲಿ ಮತ್ತು ತಾಂತ್ರಿಕ ವೇದಿಕೆಯ ನಿರ್ವಾಹಕನಲ್ಲಿ ಪ್ರಕಟಿಸತಕ್ಕದ್ದು.

(7) ತಾಂತ್ರಿಕ ವೇದಿಕೆ ನಿರ್ವಾಹಕನು ಯಾವುದೇ ಅರ್ಜಿಯನ್ನು ಅನುಮೋದಿಸುವ ಮೊದಲು, ಪ್ರಸ್ತಾವಿತ ಭಾಗವಹಿಸುವವನೊಂದಿಗೆ ಸಮಾಲೋಚಿಸಿದ ಮೇಲೆ, 15ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರವು ಅಧಿಸೂಚಿಸಿದ ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಅರ್ಜಿದಾರನ ಭಾಗವಹಿಸುವಿಕೆಗಾಗಿ ಮುಂದುವರಿದ ನಿಬಂಧನೆಗಳು ಅಥವಾ ಷರತ್ತುಗಳನ್ನು ಶಿಫಾರಸ್ಸು ಮಾಡಬಹುದು.

(8) ಈ ಪ್ರಕರಣದ ಅಡಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಅನುಮೋದಿಸಿದ ಆದೇಶವನ್ನು ಮಾಡಿದ ಕೂಡಲೇ ಭಾಗವಹಿಸುವವನು, ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಅನುಮೋದಿಸಿದ ಸರಕುಗಳು ಅಥವಾ ಸೇವೆಗಳ ಪರೀಕ್ಷಣೆಯನ್ನು ಪ್ರಾರಂಭಿಸಬಹುದು.

(9) ತಾಂತ್ರಿಕ ವೇದಿಕೆ ನಿರ್ವಾಹಕನ ಲಿಖಿತ ಪೂರ್ವಾನುಮೋದನೆಯನ್ನು ಪಡೆಯದೆ ನಿಯಂತ್ರಣ ತಾಂತ್ರಿಕ ವೇದಿಕೆಯಲ್ಲಿ ಸರಕುಗಳು ಅಥವಾ ಸೇವೆಗಳಿಗೆ ಯಾವುದೇ ವಾಸ್ತವಿಕ ಬದಲಾವಣೆಗಳನ್ನು ಭಾಗವಹಿಸುವವನು ಮಾಡುವಂತಿಲ್ಲ.

**ಟಿಪ್ಪಣಿ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ, ವಾಸ್ತವಿಕ ಬದಲಾವಣೆಗಳೆಂದರೆ (4)ನೇ ಉಪಪ್ರಕರಣದ ಅಡಿಯಲ್ಲಿ ಸರಕುಗಳು ಅಥವಾ ಸೇವೆಗಳ ಮೌಲ್ಯಮಾಪನಕ್ಕಾಗಿನ ಮಾನದಂಡಗಳಿಗೆ ಪರಿಣಾಮವನ್ನುಂಟು ಮಾಡುವ ಯಾವುದೇ ಬದಲಾವಣೆಗಳು.

(10) ತಾಂತ್ರಿಕ ವೇದಿಕೆಯ ನಿರ್ವಾಹಕನು ಪ್ರತಿಯೊಬ್ಬ ಭಾಗವಹಿಸುವವನೊಂದಿಗೆ ಸಮಾಲೋಚಿಸಿದ ಮೇಲೆ ಮತ್ತು 16ನೇ ಪ್ರಕರಣದ ಅಡಿಯಲ್ಲಿ ನಿಯಂತ್ರಣಾ ತಾಂತ್ರಿಕ ವೇದಿಕೆಯ ಮುಕ್ತಾಯ ಅಥವಾ ಹಿಂಪಡೆಯುವಲ್ಲಿ ಗ್ರಾಹಕರ ರಕ್ಷಣೆಯನ್ನು ಕಾನೂನುಗಳೊಂದಿಗೆ ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳಲು ಅನುಸರಿಸಬೇಕಾದ ಬದಲಾವಣಾ ತಂತ್ರವನ್ನು ಶಿಫಾರಸ್ಸು ಮಾಡತಕ್ಕದ್ದು.

(11) ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವವರ ಕುರಿತು ನಿಯಮಿಸಬಹುದಾದ ಅಂಥ ಮಾಹಿತಿಯನ್ನು ಪ್ರಾಧಿಕಾರದ ಜಾಲತಾಣದಲ್ಲಿ ಮತ್ತು ತಾಂತ್ರಿಕ ವೇದಿಕೆ ನಿರ್ವಾಹಕನಲ್ಲಿ ಬಹಿರಂಗಪಡಿಸತಕ್ಕದ್ದು.

**15. ನಿಯಂತ್ರಣಾ ತಾಂತ್ರಿಕ ವೇದಿಕೆಯ ಮಾರ್ಪಾಡು.-** (1) ಪ್ರಾಧಿಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ತನ್ನದೇ ಗೊತ್ತುವಳಿಯ ಮೇಲೆ ಅಥವಾ ತಾಂತ್ರಿಕ ವೇದಿಕೆ ನಿರ್ವಾಹಕನ ಶಿಫಾರಸ್ಸಿನ ಮೇಲೆ, 13ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಅಧಿಸೂಚನೆಯಲ್ಲಿ ಕಲ್ಪಿಸಿದ ಕಾನೂನಿನ ಯಾವುದೇ ವಿನಾಯಿತಿಗಳು ಅಥವಾ ಮಾರ್ಪಾಡುಗಳನ್ನು ಅದು ಯಾವೊಬ್ಬ ಭಾಗವಹಿಸುವವನಿಗೆ ಅನ್ವಯಿಸುವಷ್ಟರ ಮಟ್ಟಿಗೆ ಮಾಡಬಹುದು.

(2) ಪ್ರಾಧಿಕಾರವು, ತಾಂತ್ರಿಕ ವೇದಿಕೆ ನಿರ್ವಾಹಕನ ಶಿಫಾರಸ್ಸಿನ ಮೇಲೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, 12ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಅದು ಯಾವೊಬ್ಬ ಭಾಗವಹಿಸುವವನಿಗೆ ಅನ್ವಯಿಸುವಷ್ಟರ ಮಟ್ಟಿಗೆ ಮಾರ್ಪಾಡು ಮಾಡಬಹುದು.

(3) ಪ್ರಾಧಿಕಾರವು, ತಾಂತ್ರಿಕ ವೇದಿಕೆ ನಿರ್ವಾಹಕನ ಅರ್ಜಿಯ ಮೇಲೆ ತಾಂತ್ರಿಕ ವೇದಿಕೆ ಅನುಮತಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಅದು ಯುಕ್ತವೆಂದು ಭಾವಿಸುವ ಅಂಥ ವ್ಯಾಪ್ತಿಯವರೆಗೆ ಮತ್ತು ಅಂಥ ವಿಧಾನದಲ್ಲಿ ಮಾರ್ಪಾಡು ಮಾಡಬಹುದು.

(4) ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(5) ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ಅರ್ಜಿದಾರ ಅಥವಾ ಭಾಗವಹಿಸುವವನು ಹಿಂದೆ ಮಾಡಿರುವುದಾವುದೂ (1) ಮತ್ತು (2)ನೇ ಉಪಪ್ರಕರಣಗಳಲ್ಲಿನ ಯಾವುದೇ ಮಾರ್ಪಾಡುಗಳ ಸಿಂಧುತ್ವಕ್ಕೆ ಪರಿಣಾಮ ಬೀರತಕ್ಕದ್ದಲ್ಲ.

**16. ನಿಯಂತ್ರಣಾ ತಾಂತ್ರಿಕ ವೇದಿಕೆಯ ಮುಕ್ತಾಯ ಅಥವಾ ಹಿಂಪಡೆಯುವಿಕೆ.-** (1) 15ನೇ ಪ್ರಕರಣದಲ್ಲಿ ಮಾಡಲಾದ ಕಾಲಾವಧಿಯ ಯಾವುದೇ ಮಾರ್ಪಾಡಿಗೆ ಒಳಪಟ್ಟು, 12ನೇ ಪ್ರಕರಣದ ಅಡಿಯಲ್ಲಿ ನಿಯಮಿಸಿದ ಕಾಲಾವಧಿಯ ಮುಕ್ತಾಯದ ಮೇಲೆ ನಿಯಂತ್ರಣಾ ತಾಂತ್ರಿಕ ವೇದಿಕೆಯು ಮುಂದುವರೆಯತಕ್ಕದ್ದಲ್ಲ.

(2) ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಯಾವುದೇ ಭಾಗವಹಿಸುವನ ಅನುಮೋದನೆಯನ್ನು, ಅಂಥ ಭಾಗವಹಿಸುವವನು,-

(ಎ) ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಆತನ ಭಾಗವಹಿಸುವಿಕೆಯನ್ನು ಮುಂದುವರೆಸದಿರುವ ಬಗ್ಗೆ ಅವನ ಇಚ್ಛೆಯನ್ನು ತಾಂತ್ರಿಕ ವೇದಿಕೆಯ ನಿರ್ವಾಹಕನಿಗೆ ಅದಕ್ಕಾಗಿರುವ ಕಾರಣಗಳೊಂದಿಗೆ ಲಿಖಿತದಲ್ಲಿನ ತಿಳುವಳಿಕೆ ಪತ್ರವನ್ನು ಕಳುಹಿಸಿದಾಗ;

(ಬಿ) ಪ್ರಾಧಿಕಾರವು ಅಥವಾ ತಾಂತ್ರಿಕ ವೇದಿಕೆ ನಿರ್ವಾಹಕನು ನಿಯಮಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲನಾದಾಗ;

(ಸಿ) ತಪ್ಪಾದ, ದಾರಿತಪ್ಪಿಸುವ ಅಥವಾ ನಿಖರತೆಯಿಲ್ಲದ ಮಾಹಿತಿಯನ್ನು ಸಲ್ಲಿಸಿದರೆ, ಅಥವಾ ವಾಸ್ತವಿಕ ಸಂಗತಿಗಳನ್ನು ಬಹಿರಂಗಪಡಿಸುವುದನ್ನು ಮರೆಮಾಚಿದರೆ ಅಥವಾ ವಿಫಲನಾದರೆ;

(ಡಿ) ವ್ಯವಹಾರ ನಡೆಸುವಲ್ಲಿ ಪ್ರಾಧಿಕಾರವು ಸ್ಪಷ್ಟವಾಗಿ ವಿನಾಯಿತಿಸಿಲ್ಲದ ಅಥವಾ ಮಾರ್ಪಡಿಸಿಲ್ಲದ ಜಾರಿಯಲ್ಲಿರುವ ಯಾವುದೇ ಕಾನೂನಿನ ಇತರ ಉಪಬಂಧಗಳನ್ನು ಉಲ್ಲಂಘಿಸಿದರೆ; ಮತ್ತು

(ಇ) ಅದರ ಗ್ರಾಹಕರಿಗೆ ಅಥವಾ ಸಾರ್ವಜನಿಕರಿಗೆ ಹೆಚ್ಚಿನ ರೀತಿಯಲ್ಲಿ ಕೆಡುಕುಂಟಾಗುವ ರೀತಿಯಲ್ಲಿ ಅಧಿಕ ವ್ಯವಹಾರವನ್ನು ನಡೆಸಿದರೆ; ಅಥವಾ ತಾಂತ್ರಿಕ ದೋಷವುಳ್ಳ ಸರಕುಗಳು ಅಥವಾ ಸೇವೆಗಳನ್ನು ನೀಡಿದರೆ ಅಥವಾ ಸರಕುಗಳ ಅಥವಾ ಸೇವೆಗಳಿಗೆ ಯಾವಾಗಲೂ ವಿಫಲತೆಯನ್ನು ಉಂಟುಮಾಡುವ ದೌರ್ಬಲ್ಯವಿದ್ದರೆ ಅಥವಾ ವಂಚನೆಯ ಹೆಚ್ಚು ಪರಿಣಾಮಗಳಿಗೆ ಮುಂದಾದರೆ,

-ತಾಂತ್ರಿಕ ವೇದಿಕೆ ನಿರ್ವಾಹಕನು ಹಿಂತೆಗೆದುಕೊಳ್ಳಬಹುದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಹಿಂತೆಗೆತದ ಆದೇಶವು ಲಿಖಿತದಲ್ಲಿ ಮಾಡಿದ ಕಾರಣವುಳ್ಳ ಆದೇಶವಾಗಿರತಕ್ಕದ್ದು ಮತ್ತು ಬಂಧಕಾರಿಯಾಗಿರತಕ್ಕದ್ದು.

(4) ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿನ ಪ್ರತಿಯೊಬ್ಬ ಭಾಗವಹಿಸುವವನು ನಿಯಂತ್ರಣಾ ತಾಂತ್ರಿಕ ವೇದಿಕೆಯ ಮುಕ್ತಾಯದ ತರುವಾಯ ಎಲ್ಲಾ ಅನ್ವಯಿಕ ಕಾನೂನುಗಳನ್ನು ಪಾಲಿಸುವಲ್ಲಿ ಹೊಣೆಗಾರನಾಗಿರತಕ್ಕದ್ದು.

(5) ಭಾಗವಹಿಸುವವನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ತಾಂತ್ರಿಕ ವೇದಿಕೆಯ ನಿರ್ವಾಹಕನು ಭಾಗವಹಿಸುವವನ ವಿರುದ್ಧ ಹಿಂತೆಗೆತದ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**17. ಅಪೀಲುಗಳು.-** (1) ತಾಂತ್ರಿಕ ವೇದಿಕೆ ನಿರ್ವಾಹಕನ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಂಥ ಆದೇಶದ 30 ದಿನಗಳ ಒಳಗಾಗಿ ಪ್ರಾಧಿಕಾರಕ್ಕೆ ಅಪೀಲನ್ನು ಮಾಡಬಹುದು.

(2) ಪ್ರಾಧಿಕಾರವು ಅಪೀಲನ್ನು ಪರಿಗಣಿಸಬಹುದು ಮತ್ತು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ ವಿಲೇ ಮಾಡಬಹುದು ಹಾಗೂ ಈ ಕುರಿತು ಸೂಕ್ತ ಆದೇಶಗಳನ್ನು ಮಾಡಬಹುದು ಮತ್ತು ಪ್ರಾಧಿಕಾರದ ಆದೇಶವು ಅಂತಿಮವಾಗಿರತಕ್ಕದ್ದು.

## ಅಧ್ಯಾಯ IV

## ಸಂಕೀರ್ಣ

**18. ತಾಂತ್ರಿಕ ಸಚಿವಾಲಯದ ರಚನೆ.-** (1) ಪ್ರಾಧಿಕಾರಕ್ಕೆ ತಾಂತ್ರಿಕ ಸಚಿವಾಲಯವು ಸಹಕರಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ವ್ಯವಸ್ಥಾಪನಾತಂತ್ರ (logisticall), ತಾಂತ್ರಿಕ ಮತ್ತು ಸಂಶೋಧನಾ ನೆರವನ್ನು ನೀಡಲು ಹಾಗೂ ತಾಂತ್ರಿಕ ವೇದಿಕೆ ನಿರ್ವಾಹಕರನ್ನು ಮತ್ತು ತಾಂತ್ರಿಕ ವೇದಿಕೆಯಲ್ಲಿ ಭಾಗವಹಿಸುವವರನ್ನು ಮೇಲ್ವಿಚಾರಿಸುವುದಕ್ಕಾಗಿ ತಾಂತ್ರಿಕ ಸಚಿವಾಲಯವನ್ನು ರಚಿಸತಕ್ಕದ್ದು.

(3) ತಾಂತ್ರಿಕ ಸಚಿವಾಲಯವು ನಿಯಮಿಸಬಹುದಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(4) ತಾಂತ್ರಿಕ ಸಚಿವಾಲಯದ ನೇತೃತ್ವವನ್ನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ವಹಿಸತಕ್ಕದ್ದು ಮತ್ತು ಪಟ್ಟಿ ಮಾಡಬಹುದಾದ ಅಂಥ ವ್ಯಕ್ತಿಗಳು ಸಿಬ್ಬಂದಿಯಾಗಿರತಕ್ಕದ್ದು ಮತ್ತು ಅವರ ನೇಮಕಾತಿ ವಿಧಾನ, ಕನಿಷ್ಠ ವಿದ್ಯಾರ್ಹತೆ ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಸದರಿ ಸಿಬ್ಬಂದಿಯ ಸಂಬಳ ಮತ್ತು ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**19. ಪ್ರಾಧಿಕಾರದ ಆಯವ್ಯಯ.-** (1) ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ ಮುಂಬರುವ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಪ್ರಾಧಿಕಾರವು ಪ್ರತಿ ವರ್ಷವೂ ಸಿದ್ಧಪಡಿಸತಕ್ಕದ್ದು ಮತ್ತು ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಪ್ರಾಧಿಕಾರವು, ಅವಶ್ಯವಾದರೆ, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಪೂರಕ ಆಯವ್ಯಯ ಅಂದಾಜುಗಳನ್ನು ಸಹ ಸಿದ್ಧಪಡಿಸಬಹುದು.

(2) ಸರ್ಕಾರವು ಈ ಆಯವ್ಯಯ ಅಂದಾಜುಗಳನ್ನು ಮತ್ತು ಪೂರಕ ಆಯವ್ಯಯ ಅಂದಾಜುಗಳನ್ನು ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಿ ಅಥವಾ ಮಾಡದೇ ಅನುಮೋದಿಸತಕ್ಕದ್ದು.

(3) ಅತ್ಯಂತ ತುರ್ತು ಸಂದರ್ಭದಲ್ಲಿ, ಒಂದು ಹಣಕಾಸು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರದ ವೆಚ್ಚವನ್ನು, (2)ನೇ ಉಪಪ್ರಕರಣದಡಿ ಸರ್ಕಾರವು ಅನುಮೋದಿಸಿದ ವಾರ್ಷಿಕ ಅಥವಾ ಪೂರಕ ಆಯವ್ಯಯ ಅಂದಾಜಿನಲ್ಲಿ ಸೇರಿಸಿಲ್ಲದಿದ್ದಾಗ್ಯೂ ಅಂಥ ವೆಚ್ಚವನ್ನು ಮಾಡಲು ಸದಸ್ಯ ಕಾರ್ಯದರ್ಶಿಯು ಸಕ್ಷಮನಾಗಿರತಕ್ಕದ್ದು.

(4) ಸದಸ್ಯ ಕಾರ್ಯದರ್ಶಿಯು, ಒಂದು ಬಾರಿಗೆ ಗರಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಒಳಪಟ್ಟು ವೆಚ್ಚದ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ, ನಿಧಿಗಳ ಪುನರ್ ವಿನಿಯೋಗ ಮಾಡುವ ಅಧಿಕಾರವನ್ನೂ ಹೊಂದಿರತಕ್ಕದ್ದು.

**20. ಪ್ರಾಧಿಕಾರದ ನಿಧಿ.-** (1) ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,-

(ಎ) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಅಥವಾ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಸಹಾಯಧನಗಳು, ದೇಣಿಗೆಗಳು ಮತ್ತು ಕೊಡುಗೆಗಳನ್ನು;

(ಬಿ) ಪ್ರಾಧಿಕಾರವು ಸಾಲ ಪಡೆದ ಮೊಬಲಗನ್ನು; ಮತ್ತು

(ಸಿ) ಯಾವುದೇ ಮೂಲದಿಂದಾಗಲಿ, ಪ್ರಾಧಿಕಾರವು ಅಥವಾ ಪ್ರಾಧಿಕಾರದ ಪರವಾಗಿ ಪಡೆದುಕೊಂಡ ಇತರ ಎಲ್ಲಾ ಮೊತ್ತಗಳನ್ನು, ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ರಾಷ್ಟ್ರೀಯ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದ ಖಜಾನೆಯಲ್ಲಿ ಹೂಡತಕ್ಕದ್ದು.

(4) ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನವೇನಾದರೂ ಇದ್ದಲ್ಲಿ ಅವನ್ನೂ ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**21. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** (1) ಸದಸ್ಯ ಕಾರ್ಯದರ್ಶಿ ಅಥವಾ ಆತನು ಹೆಸರಿಸಿದ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯು, ನಿಯಮಿಸಬಹುದಾದ ಅಂಥ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಣೆಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಹಣಕಾಸು ವರ್ಷವು ಪ್ರತಿ ಕ್ಯಾಲೆಂಡರ್ ವರ್ಷ ಏಪ್ರಿಲ್ 1ನೇ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷ ದ ಮಾರ್ಚ್ 31ನೇ ದಿನದಂದು ಕೊನೆಗೊಳ್ಳತಕ್ಕದ್ದು.

(3) ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ನಿಯಂತ್ರಣಾಧಿಕಾರಿಯು ವಾರ್ಷಿಕವಾಗಿ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು. ಪ್ರಾಧಿಕಾರ ಅಥವಾ ಸರ್ಕಾರವು ಸಮವರ್ತಿ ಮತ್ತು ವಿಶೇಷ ಲೆಕ್ಕಪರಿಶೋಧನೆಗಾಗಿಯೂ ಸಹ ಆದೇಶಿಸಬಹುದು.

(4) ಲೆಕ್ಕಪರಿಶೋಧಕನು, ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಪ್ರಾಧಿಕಾರವು, ತನ್ನ ಸಭೆಯಲ್ಲಿ ಅದನ್ನು ಪರಿಶೀಲಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಮಾಡಿದ ಟೀಕೆಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಪ್ರಾಧಿಕಾರವು ಕೈಗೊಂಡ ಕ್ರಮದ ವಿವರಣೆಯೊಂದಿಗೆ ವಾರ್ಷಿಕ ಲೆಕ್ಕಪತ್ರಗಳ ವಿವರಣೆಯ ಹಾಗೂ ಲೆಕ್ಕಪರಿಶೋಧಕನ ವರದಿಯ ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಇದನ್ನು ಮಂಡಿಸಲು ಸರ್ಕಾರಕ್ಕೆ ಕಳುಹಿಸತಕ್ಕದ್ದು.

**22. ವಾರ್ಷಿಕ ವರದಿ.-** (1) ಪ್ರಾಧಿಕಾರವು ಪ್ರತಿ ಕ್ಯಾಲೆಂಡರ್ ವರ್ಷದ ಅಂತ್ಯದಿಂದ ಮೂರು ತಿಂಗಳ ಒಳಗಾಗಿ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ತನ್ನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.

(2) ಸರ್ಕಾರವು, ಅನುಪಾಲನೆಯೊಂದಿಗೆ ವಾರ್ಷಿಕ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**23. ಮಾಹಿತಿಯ ಗೌಪ್ಯತೆ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ, ತಾಂತ್ರಿಕ ವೇದಿಕೆ ನಿರ್ವಾಹಕನು, ವಾಣಿಜ್ಯ ರಹಸ್ಯ, ವ್ಯಾಪಾರ ರಹಸ್ಯಗಳು ಅಥವಾ ಬೌದ್ಧಿಕ ಸ್ವತ್ತು ಇವುಗಳನ್ನು ಒಳಗೊಂಡು ಅದರ ಬಹಿರಂಗಪಡಿಸುವಿಕೆಯು ನಿಯಂತ್ರಣಾ ತಾಂತ್ರಿಕ ವೇದಿಕೆಯಲ್ಲಿ ಯಾವುದೇ ಅರ್ಜಿದಾರ ಅಥವಾ ಭಾಗವಹಿಸುವವನ ಸ್ಪರ್ಧಾತ್ಮಕ ಸ್ಥಾನಕ್ಕೆ ಧಕ್ಕೆ ಉಂಟುಮಾಡುವ ಅಂಥ ಅರ್ಜಿದಾರ ಅಥವಾ ಭಾಗವಹಿಸುವವನಿಂದ ಬಹಿರಂಗಗೊಳಿಸಿದ ಅಂಥ ಮಾಹಿತಿಯ ಗೌಪ್ಯತೆಯನ್ನು ರಹಸ್ಯವಾಗಿ ಇಡತಕ್ಕದ್ದು.

**24. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**25. ದಂಡಗಳು.-** (1) ಪ್ರಾಧಿಕಾರ ಅಥವಾ ತಾಂತ್ರಿಕ ವೇದಿಕೆ ನಿರ್ವಾಹಕನಿಂದ ಹೇಳಲಾದ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವ ಯಾವುದೇ ತಾಂತ್ರಿಕ ವೇದಿಕೆ ನಿರ್ವಾಹಕ ಅಥವಾ ಯಾವುದೇ ಭಾಗವಹಿಸುವವನು ನಿರ್ವಹಿಸುವ ಅಥವಾ ಭಾಗವಹಿಸುವ ಅನುಮತಿಯನ್ನು ಹಿಂತೆಗೆದುಕೊಳ್ಳುವುದರ ಜೊತೆಗೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಅಥವಾ ತಾಂತ್ರಿಕ ನಿರ್ವಹಣಾ ವೇದಿಕೆಯಲ್ಲಿ ನಿರ್ವಹಿಸುವ ಅಥವಾ ಭಾಗವಹಿಸುವಾಗ ಯಾವುದೇ ಸಾರ್ವಜನಿಕರಿಗೆ ಉಂಟಾದ ಹಾನಿಯಷ್ಟು ವಿಸ್ತರಿಸಬಹುದಾದ ಅಂಥ ಮೊತ್ತದ ಜುಲ್ಮಾನೆಗೆ ಹೊಣೆಗಾರನಾಗಿರತಕ್ಕದ್ದು. ಪ್ರಾದಿಕಾರವು ಸಂಗ್ರಹಿತ ವಿಚಾರಣೆಯ ತರುವಾಯ ಮತ್ತು ನಿವೇದಿಸುವ ಅವಕಾಶವನ್ನು ನೀಡಿದ ತರುವಾಯ ತಪ್ಪಿತಸ್ಥ ತಾಂತ್ರಿಕ ವೇದಿಕೆ ನಿರ್ವಹಕ ಅಥವಾ

ಭಾಗವಹಿಸುವವನಿಗೆ ಜುಲ್ಮಾನೆಯನ್ನು ವಿಧಿಸತಕ್ಕದ್ದು ಮತ್ತು ಹಾಗೆ ಹಾನಿಯಾದ ಸಂಬಂಧಿತ ಸಾರ್ವಜನಿಕನಿಗೆ ಉಂಟಾದ ನಷ್ಟವನ್ನು ಒಳ್ಳೆಯ ರೀತಿಯಲ್ಲಿ ಭರಿಸುವುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಧಿಕಾರ ವ್ಯಾಪ್ತಿಯ ಜಿಲ್ಲಾ ನ್ಯಾಯಾಧೀಶರಿಗೆ ಮೇಲ್ಮನವಿ ಸಲ್ಲಿಸಬಹುದು.

**26. ಸಿವಿಲ್ ನ್ಯಾಯಾಲಯಗಳ ಮೇಲೆ ಅಧಿಕಾರವ್ಯಾಪ್ತಿಯ ಪ್ರತಿಬಂಧ.-** 17 ಮತ್ತು 25ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಇತ್ಯರ್ಥಪಡಿಸಬೇಕಾದ, ನಿರ್ಣಯಿಸಬೇಕಾದ ಅಥವಾ ವ್ಯವಹರಿಸಬೇಕಾದ ಅಥವಾ ನಿರ್ಧರಿಸಬೇಕಾದ ಅಗತ್ಯವಿರುವ ಈ ಅಧಿನಿಯಮದ ಅಡಿಯಲ್ಲಿನ ಅಥವಾ ಅದರ ಮೂಲಕವಾಗಿ ಯಾವುದೇ ವಿಷಯವನ್ನು ಇತ್ಯರ್ಥಪಡಿಸಲು, ತೀರ್ಮಾನಿಸಲು ಅಥವಾ ಯಾವುದೇ ಪ್ರಶ್ನೆಯೊಂದಿಗೆ ವ್ಯವಹರಿಸುವುದನ್ನು ನಿರ್ಧರಿಸಲು ಜಿಲ್ಲಾ ನ್ಯಾಯಾಲಯಕ್ಕಿಂತ ಕೆಳಗಿನ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**27. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ಸರ್ಕಾರವು ಅಧಿಸೂಚನೆಯ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಅಧಿಸೂಚನೆಯನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**28. ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಮತ್ತು ಅದರಡಿಯಲ್ಲಿ ಹೊರಡಿಸಲಾದ ಅಥವಾ ಮಾಡಲಾದ ಆದೇಶಗಳು ಪರಿಣಾಮಕಾರಿಯಾಗಿರತಕ್ಕದ್ದು.

**29. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**30. ವಿನಿಯಮಗಳ ರಚನಾಧಿಕಾರ.-** ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 29ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

**31. ತಾತ್ಕಾಲಿಕ ಉಪಬಂಧಗಳು.-** ಕರ್ನಾಟಕ ನ್ಯಾವಿನ್ಯತಾ ಪ್ರಾಧಿಕಾರ ಅಧ್ಯಾದೇಶ, 2019ರ (2019ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2) ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನಿಯಮ ಅಧಿಸೂಚನೆ ಅಥವಾ ಆದೇಶ ಅಥವಾ ಈ ಅಧಿನಿಯಮದ ಅಧಿನಿಯಮಿಸುವಿಕೆಯ ಮುಂದುವರಿಕೆಗಾಗಿ ಸಂಬಂಧಿಸಿದ ಯಾವುದೇ ವಿಷಯಗಳಿಗಾಗಿ ಅಥವಾ ಅನ್ಯಥಾ ಉಪಬಂಧಿಸುವುದಕ್ಕಾಗಿ, ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ, ಈ ಅಧಿನಿಯಮದ ಉಪಬಂಧಗಳಿಗೆ ಅವುಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಯಾವುದೇ ನಿಯಮ, ಅಧಿಸೂಚನೆ ಅಥವಾ ಆದೇಶವನ್ನು ರದ್ದುಪಡಿಸಿದ ಹೊರತು ಮತ್ತು ಆವರೆಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾದಂತೆ ಅಥವಾ ಹೊರಡಿಸಲಾದಂತೆ ಅಥವಾ ಗೊತ್ತುಪಡಿಸಲಾದಂತೆ ಜಾರಿಯಲ್ಲಿರುವುದು ಹೇಗೋ ಹಾಗೆ ಪರಿಣಾಮಕಾರಿಯಾಗಿರುವುದು ಮುಂದುವರೆಯತಕ್ಕದ್ದು.

**32. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ಅಧ್ಯಾದೇಶ, 2019ನ್ನು (2019ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.